ಶ್ರೀ ಕುಂಬ್ಳೆ ಸುಂದರ್‌ರಾವ್ : ಯಾರು ಸದನಕ್ಕೆ ಹೆಚ್ಚು ದಿನಗಳ ಕಾಲ ಗೈರು ಹಾಜರಾಗಿ ಇರುತ್ತಾರೆ ಅವರಿಗೂ ಕೂಡ ಬಹುಮಾನ ಕೊಡುತ್ತೀರಾ?

ಅಧ್ಯಕ್ಷರು : ಅವರಿಗೂ ಕೊಡೋಣ ಮತ್ತು ಸದನಕ್ಕೆ ಬಂದು ಕೇವಲ ಸಹಿ ಹಾಕಿ ಯಾರು ಹೊರಟುಹೋಗಿರುತ್ತಾರೆ, ಅಂಥವರಿಗೂ ಬಹುಮಾನ ಕೊಡೋಣ.

ಶ್ರೀ ಕುಂಬ್ಳೆ ಸುಂದರ್‌ರಾವ್ : ಸದನದಲ್ಲಿ ಬಂದು ಸುಮ್ಮನೆ ಕುಳಿತು ಹಾಗೆಯೇ ಹೋಗುವವರಿಗೆ ಬಹುಮಾನ ಕೊಡಲಾಗುತ್ತದೆಯೇ?

ಅಧ್ಯಕ್ಷರು : ಅವರಿಗೆ ಕೊಟ್ಟರೆ ಪರವಾಗಿಲ್ಲ. ಅವರಿಗಿಂತ ಸಹಿ ಹಾಕಿ ಹೊರಟು ಹೋಗುತ್ತಾರಲ್ಲಾ ಅವರದ್ದು ಬಹಳ ಮುಖ್ಯ.

ಶ್ರೀ ವಿಜಯಕುಮಾರ್ ಖಂಡ್ರೆ : ವೃತ್ತಿ ಶಿಕ್ಷಣದ ಅಧ್ಯಾಪಕರ ಸೇವೆಯನ್ನು ಮಾಡಲು ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು ಮತ್ತು ಈ ಕ್ಯಾಬಿನೆಟ್ ಡಿಸಿಷನ್ ಕೂಡ ಆಗಿತ್ತು. ಇಷ್ಟೆಲ್ಲಾ ಆಗಿದ್ದರೂ ಕೂಡ ಕಳೆದ ಎರಡೂ ವರ್ಷಗಳಿಂದ ಈ ಕಾರ್ಯವಾಗದೇ ಪೆಂಡಿಂಗ್‌ನಲ್ಲಿದೆ. ಹಣಕಾಸು ಇಲಾಖೆಯ ಕನ್‌ಕರೆನ್ಸ್ ಸಿಕ್ಕಿಲ್ಲವೆಂದು ಈ ಬಗ್ಗೆ ಫೈಲನ್ನು ತಡೆಹಿಡಿದಿದ್ದಾರೆ.

ಅಧ್ಯಕ್ಷರು : ಈ ವಿಷಯಕ್ಕೆ ಸಂಬಂಧಪಟ್ಟ ಸಚಿವರು ಬಹಳ ಅನುಭವವುಳ್ಳವರಾಗಿದ್ದಾರೆ. ನೀವು ವಿಷಯವನ್ನು ಬೇಗ ಮುಗಿಸಿ.

ಶ್ರೀ ವಿಜಯಕುಮಾರ್ ಖಂಡ್ರೆ : ಆದುದರಿಂದ ಈ ಅಧ್ಯಾಪಕರನ್ನು ಸಾಧ್ಯವಾದಷ್ಟು ಬೇಗ ಖಾಯಂಗೊಳಿಸಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸಂಬಂಧಪಟ್ಟ ಸಚಿವರಿಗೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಅವರು ಈಗಾಗಲೇ ಮಾತನಾಡುತ್ತಾ ಹಣಕಾಸು ಇಲಾಖೆಯಲ್ಲಿ ಈ ಬಗ್ಗೆ ಪ್ರಸ್ತಾವನೆ ಇದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಸರ್ಕಾರ ಗಮನಕೊಟ್ಟಿದೆ. ಹಣಕಾಸು ಇಲಾಖೆ ಪ್ರಸ್ತಾವನೆ ಆದಮೇಲೆ ಖಂಡಿತವಾಗಿಯೂ ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು.

ಅಗ್ನಿಶಾಮಕ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಭಡ್ತಿ

+ ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಪೋಲಿಸ್ ಇಲಾಖೆಯ ಅಂಗವಾಗಿರತಕ್ಕಂಥ ಅಗ್ನಿಶಾಮಕ ಇಲಾಖೆ ಏನಿದೆ ಇದನ್ನು 1965ನೇ ಇಸವಿಯಲ್ಲಿಯೇ ಬೇರೆ ಇಲಾಖೆಯಾಗಿ ಬೇರ್ಪಡಿಸಿ 1971ರಲ್ಲಿ ಇದಕ್ಕೆ ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಮಾಡಿದ್ದಾರೆ. ಸರ್ಕಾರದ ಕಾನೂನಿನಂತೆ ಈ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪ್ರತಿ 5 ವರ್ಷಕ್ಕೊಮ್ಮೆ ಪರಿಷ್ಕರಿಸಬೇಕು. ಆದರೆ ಅಂದು 1965ನೇ ಇಸವಿಯಲ್ಲಿ

ಸರಿಯಾದ ಅಧಿಕಾರಿಗಳು ಇಲ್ಲವೆಂದು ಹೇಳಿಕೊಂಡು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ರವರನ್ನೇ ಆಡಳಿತ ನಿರ್ದೇಶಕರ ಹುದ್ದೆಗೆ ನಿಯೋಜನೆ ಮಾಡುತ್ತಿದ್ದರು. ಮತ್ತೆ ಈಗ ಅದು ಡಿ.ಜಿ. ಮಟ್ಟಕ್ಕೆ ಏರಿದೆ. ಉಪ ನಿರ್ದೇಶಕರ ಕಾರ್ಯ ನಿರ್ವಹಿಸುವುದಕ್ಕೆ ಐ.ಪಿ.ಎಸ್. ಶ್ರೇಣಿಯ ಅಧಿಕಾರಿಗಳನ್ನು ನಿಯೋಜನೆ ಮಾಡುತ್ತಿದ್ದಾರೆ. ನಾನು ಹೇಳುವುದೇನೆಂದರೆ ಈಗಾಗಲೇ ಅಗ್ನಿ ಶಾಮಕ ಇಲಾಖೆಯಲ್ಲಿಯೇ ಬಹಳಷ್ಟು ಜನರು ವಿಜ್ಞಾನ ಪದವೀಧರರಾಗಿ ಮತ್ತು ನ್ಯಾಶನಲ್ ಫೈರ್ ಸರ್ವೀಸ್ ಕಾಲೇಜ್‌ಗಳಲ್ಲಿ ಡಿಪ್ಲೊಮೋ ಹೋಲ್ಡರ್ಸ್ ಆಗಿ ಉನ್ನತ ತರಬೇತಿಗಳನ್ನು ಪಡೆದು ವಿದೇಶಕ್ಕೂ ಕೂಡ ಹೋಗಿ ಬಂದ ಬಹಳ ಅಧಿಕಾರಿಗಳು ಬಡ್ತಿವಂಚಿತರಾಗಿದ್ದಾರೆ. ನಾನು ಸರ್ಕಾರಕ್ಕೆ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಈಗಾಗಲೇ ನೀವು ಪಶುಸಂಗೋಪನಾ ಇಲಾಖೆಯಲ್ಲಿ, ಲೋಕೋಪಯೋಗಿ ಇಲಾಖೆಯಲ್ಲಿ ಅಥವಾ ಇತರ ಯಾವುದೇ ಇಲಾಖೆಯಲ್ಲಿ ಅಲ್ಲಿಯ ಇಲಾಖಾಧಿಕಾರಿಯವರನ್ನೇ ಬಡ್ತಿಗೊಳಿಸಿ ನಿಯುಕ್ತಿ ಮಾಡತಕ್ಕಂಥ ಕಾರ್ಯಕ್ರಮ ಇದೆ. ಮತ್ತು ಆ ರೀತಿಯ ನಿಯಮಾವಳಿ ಇದೆ. ಅದೇ ಪ್ರಕಾರ ಅಗ್ನಿಶಾಮಕ ಇಲಾಖೆಯಲ್ಲೂ ಬಡ್ತಿಗೆ ಅರ್ಹರಾಗಿರತಕ್ಕಂಥ ಅಧಿಕಾರಿಗಳಿಗೇ ಏಕೆ ಬಡ್ತಿ ಕೊಡಬಾರದು? ಐ.ಪಿ.ಎಸ್. ಶ್ರೇಣಿಯವರನ್ನೇ ನೀವು ಏಕೆ ನಿಯೋಜನೆ ಮಾಡಬೇಕು? ಈ ಬಗ್ಗೆ ಬೇರೆ ರಾಜ್ಯಗಳಾದ ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಮುಂತಾದ ಕಡೆ ಅಗ್ನಿ ಶಾಮಕ ಇಲಾಖೆಯಲ್ಲಿಯೇ ಇದ್ದ ಸಂಪೂರ್ಣವಾಗಿ ತರಬೇತಿಯನ್ನು ಪಡೆದವರನ್ನೇ ಇಲಾಖಾಕಾಧಿಕಾರಿಯಾಗಿ ಬಡ್ತಿ ಕೊಡಲಾಗಿದೆ. ಅದೇ ರೀತಿ ತಮ್ಮ ಸರ್ಕಾರದಲ್ಲೂ ಕೂಡ ಏಕೆ ಅಳವಡಿಸಿಕೊಳ್ಳಬಾರದು? ಈ ಬಗ್ಗೆ1971ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು ಏನಿವೆ ಅದನ್ನು ಏಕೆ ಸರ್ಕಾರ ಪರಿಷ್ಕರಿಸಬಾರದು ಎಂದು ತಮ್ಮ ಮೂಲಕ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವಿ. ಸೋಮಣ್ಣ (ಬಂಧೀಖಾನೆ ಹಾಗೂ ಅಗ್ನಿಶಾಮಕದಳ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾಪತಿಯವರು ಹೇಳಿದಂತೆ ಪೋಲಿಸ್ ಇಲಾಖೆಯಿಂದ ಅಗ್ನಿಶಾಮಕ ದಳವನ್ನು 1965ರಲ್ಲಿ ಬೇರ್ಪಡಿಸಿ 1971ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಮಾಡಿ ಹೊಸ ರೂಪವನ್ನು ಕೊಟ್ಟಿದ್ದೇವೆ. ಆ ರೀತಿ ಮಾಡಿದ ಮೇಲೆ ಈ ವೃಂದ ಮತ್ತು ನೇಮಕಾತಿ ನಿಯಮವನ್ನು ಪ್ರಾಯಶಃ ಸರಿಯಾದ ಅಳತೆ ಗೋಲಿನಲ್ಲಿ ಮಾಡದೇ ತೊಂದರೆಯಾಗಿರುವುದನ್ನು ಮನಗಂಡು ಸನ್ಮಾನ್ಯ ಮುಖ್ಯಮಂತ್ರಿಗಳು ನನಗೆ ಈ ಒಂದು ಅಧಿಕಾರವನ್ನು ಕೊಟ್ಟಮೇಲೆ ಈಗಾಗಲೇ ಅದರ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಇದಲ್ಲದೆ ಈಗಾಗಲೇ ಬಹುತೇಕ ಜನರಿಗೆ ಬಡ್ತಿಗಳನ್ನು ಕೊಟ್ಟಿದ್ದೇವೆ. ಕೊಟ್ಟಿರತಕ್ಕಂಥ ಪ್ರಮೇಷನ್‌ನಲ್ಲಿ ಬೆಂಗಳೂರು ನಗರಲ್ಲಿ ಯಾರು ಈಗ ಕೆಲಸ ಮಾಡುತ್ತಿರುತ್ತಾರೆ ಅವರಿಗೆ ಪ್ರಮೋಷನನ್ನು ಕೊಟ್ಟು ಬೇರೆ ಕಡೆ ಹಾಕಿದಾಗ ಅವರು ನಮಗೆ ಪ್ರಮೋಷನ್ ಬೇಡ ನಾವು ಬೆಂಗಳೂರಿನಲ್ಲಿಯೇ ಇರುತ್ತೇವೆ ಎಂದು ಹೇಳಿರತಕ್ಕಂತ ಕೆಲವು ಪ್ರಕರಣಗಳು ಇವೆ. ಮಾನ್ಯ ಸಭಾಪತಿಯವರು ಹೇಳಿದಹಾಗೆ ನಮ್ಮ ಇಲಾಖೆ ಸಣ್ಣ ವ್ಯಾಪ್ತಿಯಲ್ಲಿ ಪ್ರಾರಂಭವಾದ ಇಲಾಖೆ, ಇದು ಬೃಹದಾಕಾರವಾಗಿ ಬೆಳೆಯುವುದನ್ನು ಮನಗಂಡು ಈಗಾಗಲೇ ನಾವು ತಾಂತ್ರಿಕವಾಗಿರತಕ್ಕಂಥ ಉಪ ನಿರ್ದೇಶಕರ ಹುದ್ದೆಗೆ ಆ ಇಲಾಖೆಯಲ್ಲಿಯೇ ಕೆಲಸ ಮಾಡಿದಂಥವರನ್ನು ನೇಮಕ ಮಾಡುತ್ತಿದ್ದೇವೆ. ಮುಂದೆಯೂ ಕೂಡ ಉಪ ನಿರ್ದೇಶಕರ ಹುದ್ದೆಯವರೆಗೆ ಏನು ಹುದ್ದೆಗಳು

ಬರುತ್ತವೆ ಅವಕ್ಕೆ ಆ ಇಲಾಖೆಯಲ್ಲಿ ಪರಿಣತಿಯನ್ನು ಪಡೆದು ಎಲ್ಲಾ ಪರೀಕ್ಷೆಗಳನ್ನು ಪಾಸ್ ಮಾಡಿ ಅರ್ಹತೆಯನ್ನು ಯಾರು ಹೊಂದಿದ್ದಾರೆ ಅವರ ಬಗ್ಗೆ ವಿವರ ಪಡೆದು ತೀರ್ಮಾನ ಮಾಡಿ ಆ ಎರಡ್ಮೂರು ಹುದ್ದೆಗಳೇನಿವೆ ಅವಕ್ಕೆ ನೇಮಕ ಮಾಡುವ ಬಗ್ಗೆ ತೀರ್ಮಾನ ಮಾಡಿದ್ದೇವೆ.

5.00 ಪಿ.ಎಂ.

ಮತ್ತೆ ನಿರ್ದೇಶಕರ ಹುದ್ದೆಯನ್ನು ಐ.ಪಿ.ಎಸ್ ಅಧಿಕಾರಿಗಳಿಗೆ ಕೊಡುತ್ತಿದ್ದೀರಿ, ಅದನ್ನು ಕೂಡ ಏಕೆ ಇವರಿಗೆ ಮಾಡಬಾರದು ಬೇರೆ ಬೇರೆ ಇಲಾಖೆಯಲ್ಲಿ ಇದ್ದಹಾಗೆ ಎನ್ನುವ ಮಾತನ್ನು ತಾವೇನು ಹೇಳಿದ್ದೀರಿ, ಇದು ಪೊಲೀಸ್ ಇಲಾಖೆಯ ವ್ಯಾಪ್ತಿಯಿಂದ ಬೇರ್ಪಟ್ಟಿದ್ದರೂ ಕೂಡ ಈ ಒಂದು ಇಲಾಖೆ ಸೂಕ್ಷ್ಮವಾದ ಇಲಾಖೆಯಾಗಿರುವುದರಿಂದ, ಐ.ಪಿ.ಎಸ್. ಅಧಿಕಾರಿಗಳು ಬೇರೆ ಬೇರೆ ರಾಜ್ಯಗಳಲ್ಲಿ ಕೂಡ ನಿರ್ದೇಶಕರ ಕೆಲಸ ಮಾಡುತ್ತಿರುವುದರಿಂದ ತಾವು ಕೊಟ್ಟಿರತಕ್ಕಂಥ ಸಲಹೆಯನ್ನು ಮನಗಂಡು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಇನ್ನಿತರ ಹುದ್ದೆಗಳು ಏನಿದೆ ಈ ಹುದ್ದೆಗಳಿಗೆ ಅಲ್ಲಿಯೇ ಕೆಲಸ ಮಾಡತಕ್ಕಂಥ ನೌಕರರನ್ನು ತಮ್ಮ ಅರ್ಹತೆಗೆ ಅನುಗುಣವಾಗಿ ನಾವು ತುಂಬತಕ್ಕಂಥ ಕೆಲಸವನ್ನು ಮಾಡುತ್ತೇನೆನ್ನುವ ಮಾತನ್ನು ಗೌರವಾನ್ವಿತ ಸದಸ್ಯರಿಗೆ ಹೇಳುತ್ತೇನೆ.

ಮೆಟಲ್ ಲ್ಯಾಂಪ್ ಕಾರ್ಖಾನೆಗೆ ಸಂಬಂಧ ಪಟ್ಟಂತೆ

ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಮೆಟಲ್ ಲ್ಯಾಂಪ್ ಎಂಬ ಫ್ಯಾಕ್ಟರಿ ಅಲಸೂರು ಬಳಿ ಇದೆ. ಅಲ್ಲಿ 600 ಕಾರ್ಮಿಕರು ಇದ್ದಾರೆ. ಅವರನ್ನು 16ನೇ ತಾರೀಖಿನಿಂದ ಹೊರಗಡೆ ಇಟ್ಟಿದ್ದಾರೆ. ದಿನಾಂಕ 17 ರಂದು ಅಲ್ಲಿಗೆ ಕೆಲವರು ಪೋಲೀಸರು ಹೋಗಿ ಹೊಡೆದು, ಲಾಠಿ ಚಾರ್ಜ್ ಮಾಡಿ ತೊಂದರೆ ಕೊಟ್ಟಿದ್ದಾರೆ. ಕೆಲವು ಮಹಿಳಾ ಕಾರ್ಮಿಕರಿಗೆ ಒಳಗಡೆ ಹೋಗಿ ಮಾಲೀಕರಿಗೆ ಸಂಬಂಧಪಟ್ಟವರು ಮಾನಭಂಗಮಾಡಿ ಮನೆಗಳಿಗೆ ಕಳುಹಿಸಿದ್ದಾರೆ. ಇದರ ಬಗ್ಗೆ ಕಮಿಷನರ್‌ರವರ ನೋಟೀಸ್‌ಗೆ ತೆಗೆದುಕೊಂಡು ಬಂದಿದ್ದಾರೆ. ನಾನು ಮಂತ್ರಿಯವರಿಗೂ ಸಹ ಹೇಳಿದೆ. ಅದಕ್ಕೆ ಇನ್ನು ಪರಿಹಾರ ಸಿಕ್ಕಿಲ್ಲ. ಆ ಫ್ಯಾಕ್ಟರಿ ವರ್ಷಕ್ಕೆ 11 ಕೋಟಿ ರೂಪಾಯಿ ಲಾಭದಲ್ಲಿದೆ. ಹಿಂದೆ ಮೂರು ಫ್ಯಾಕ್ಟರಿ ಇತ್ತು. ಮೈಸೂರಿನಲ್ಲಿ ಒಂದು, ಬೆಂಗಳೂರಿನಲ್ಲಿ ಎರಡು ಇದ್ದವು. ಮೈಸೂರಿನಲ್ಲಿ ಇರುವಂತಹ ಫ್ಯಾಕ್ಟರಿಯನ್ನು ಕ್ಲೋಸ್ ಮಾಡಿದರು. ಬೆಂಗಳೂರಿನಲ್ಲಿ ಇರುವುದರಲ್ಲಿ ಒಂದನ್ನು ಕ್ಲೋಸ್ ಮಾಡಿದರು. ಈಗಿರುವುದರಲ್ಲಿ 600 ಜನ ಕೆಲಸ ಮಾಡುತ್ತಿದ್ದರು. ಈಗ ಇದನ್ನು ಕ್ಲೋಸ್ ಮಾಡಿ ಲ್ಯಾಂಡ್ ಡೆವಲಪರ್ಸ್‌ಗೆ ಕೊಟ್ಟು, ಆ ಕಾರ್ಮಿಕರನ್ನು ಹೊರಗಡೆ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಲೇಬರ್ ಪ್ರಾಬ್ಲಂ ಬಹಳ ಇದೆ. ದಯವಿಟ್ಟು ಆ ಕಾರ್ಮಿಕರಿಗೆ ಸರ್ಕಾರ ರಕ್ಷಣೆ ಕೊಟ್ಟು ಅವರು ಅಲ್ಲಿ ಕೆಲಸ ಮಾಡುವ ರೀತಿ ವ್ಯವಸ್ಥೆ ಮಾಡಬೇಕು. ಇನ್ನು ಎರಡನೆಯದಾಗಿ ಮಾಲೀಕನು ಆ ಜಾಗವನ್ನು ಬಿ.ಡಿ.ಎ. ಗೆ ಬರೆದುಕೊಂಡು ಆ ಕಾರ್ಖಾನೆಯನ್ನು ಫೈವ್ ಸ್ಟಾರ್ ಹೋಟೆಲ್ ಕಟ್ಟುವುದಕ್ಕೆ ಹೋಗಿದ್ದಾನೆ. ಅದಕ್ಕೆ ಪರ್ಮಿಷನ್ ಕೊಡಬಾರದು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅಲ್ಲಿನ ಕಾರ್ಮಿಕರು ದಿನಬೆಳಗಾದರೆ ನನ್ನ ಮನೆ ಬಾಗಿಲಿಗೆ ಕುಳಿತುಕೊಂಡು ಬಹಳನೋಯುತ್ತಿದ್ದಾರೆ. ಅದಕ್ಕೋಸ್ಕರ ಈ ಬಿಲ್ಡರ್ಸ್ ಹಾವಳಿ ಜಾಸ್ತಿಯಾಗಿದೆ.